ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ಕೆಟ್ಟು ಹೋದ ಬೀದಿ ದೀಪಗಳನ್ನು ತೆಗೆದು ಹೊಸ ಬಲ್ಬುಗಳನ್ನು ಹಾಕಲು ಮುಂಡಳಿ ನಿಗದಿ ಮಾಡಿರುವ ಶುಲ್ಕ.

೧ ಟ್ಯೂಬುಗಳಿಗೆ ತಲಾ ೧ ರೂಪಾಯಿ.

೨ ಬಲ್ಬುಗಳಿಗೆ ತಲಾ ೫೦ ಪೈಸೆಗಳು.

ಆ) ಈ ಶುಲ್ಕವನ್ನು ೧೯೭೬ರಲ್ಲಿ ನಿಗದಿ ಮಾಡಲಾಗಿದ್ದು ಇನ್ನೂ ಇದನ್ನು ಪರಿಷ್ಕರಿಸದೆ ಮುಂದುವರಿಸಿದೆ ಈಗಿನ ಶುಲ್ಕ ದುಬಾರಿಯೆಂಬ. ಗ್ರಾಮಗಳಲ್ಲಿ ಬೀದಿ ದೀಪ ಬದಲಾಯಿಸದೇ ಕತ್ತಲೆಯಾಗಿರುವುದಕ್ಕೆ ಮುಖ್ಯ ಕಾರಣ ಸುಟ್ಟು ಹೋದ ಬಲ್ಬುಗಳನ್ನು ಬದಲಾಯಿಸಲು ಸಂಬಂಧಪಟ್ಟವರು ಹೊಸ ಬಲ್ಬುಗಳನ್ನು ಒದಗಿಸದಿರುವುದು.

ಇ) ಸಂಬಂಧಪಟ್ಟ ಮುಂಡಲ ಪಂಚಾಯ್ತಿಯವರು ಬಲ್ಬುಗಳನ್ನು ಒದಗಿಸಿದರೆ, ಅದನ್ನು ತಡವಿಲ್ಲದೆ ಅಳವಡಿಸಲಾಗುತ್ತದೆ.

ವಿದ್ಯುತ್ ಉತ್ಪಾದನೆ ಕೊರತೆ

೭೦೨. ಶ್ರೀ ಎನ್ ಎಂ. ಆಡ್ಯಂತಾಯ (ಸುರತ್ಕಲ್).—ಮಾನ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ವಿದ್ಯುತ್ ಸಾಮರ್ಥ್ಯವೆಷ್ಟು?

ಆ) ಇದರಿಂದ ರಾಜ್ಯದ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಆಗುತ್ತಿದೆಯೇ? ಇಲ್ಲದಿದ್ದಲ್ಲಿ ಕೊರತೆ ಪ್ರಮಾಣವೆಷ್ಟು?

ಇ) ಪಸ್ತುತ ಕೊರತೆಯನ್ನು ನಿವಾರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಎ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).

ಅ) ರಾಜ್ಯದಲ್ಲಿ ೧೯೮೭–೮೮ನೇ ಸಾಲಿನ ಆಂತರಿಕ ಉತ್ಪಾದನೆಯಿಂದ ಲಭ್ಯವಾಗುವ ವಿದ್ಯುಶ್ಶಿನ ಪ್ರಮಾಣ ೭೩೫೬ ದಶಲಕ್ಷ ಯೂನಿಟ್ಟುಗಳೆಂದು ಅಂದಾಜು ಮಾಡಲಾಗಿದೆ.

ಆ) ಇಲ್ಲ ರಾಜ್ಯದಲ್ಲಿ ೧೯೮೭–೮೮ನೇ ಸಾಲಿನ ಅನಿರ್ಬಂಧ ಬೇಡಿಕೆ ೧೬೯೦೦ದಶ ಲಕ್ಷ ಯೂನಿಟ್ಟುಗಳೆಂದು ಅಂದಾಜು ಮಾಡಲಾಗಿದ್ದು ನೆರೆ ರಾಜ್ಯಗಳಿಂದ ನಿರೀಕ್ಷಿಸಿರುವ ವಿದ್ಯುತ್ ನೆರವು ಮತ್ತು ಕೇಂದ್ರದ ಯೋಜನೆಗಳಲ್ಲಿನ ರಾಜ್ಯದ ಪಾಲನ್ನು ಗಣನೆಗೆ ತೆಗೆದುಕೊಂಡರೆ ನಿವ್ವಳ ಕೊರತೆ ೬೫೫೩ ದಶ ಲಕ್ಷ ಯೂನಿಟ್ಟುಗಳಾಗುತ್ತವೆಂದು ನಿರೀಕ್ಷಿಸಲಾಗಿದೆ.

ಇ) ಮೇಲೆ ತಿಳಿಸಿರುವಂತೆ ಕೊರತೆಯ ಭಾಗವನ್ನು ನೆರೆ ರಾಜ್ಯಗಳಿಂದ ವಿದ್ಯುತ್ ನೆರವು ಪಡೆಯುವುದರಿಂದ ಮತ್ತು ಕೇಂದ್ರದ ಯೋಜನೆಗಳಿಂದ ರಾಜ್ಯದ ಪಾಲನ್ನು ಪಡೆಯುವುದರ ಮೂಲಕ ತುಂಬಲಾಗುವುದು.

ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯನ್ನು ಭಾರತೀಯ ಉಕ್ಕು ಪ್ರಾಧಿಕಾರಕ್ಕೆ ವಹಿಸಿ ಕೊಡುವ ಬಗ್ಗೆ.

೭೦೩. ಶ್ರೀ ಎನ್. ಎಂ. ಆಡ್ಯಂತಾಯ (ಸುರತ್ಕಲ್).—ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕೆಗಳು ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭದ್ರಾವತಿಯ ವಿಐಎಸ್ಎಲ್ನ್ಯಷ್ಟೀಲ್ ಅಥಾರಿಟಿ ಆಫ್ ಇಂಡಿಯಾ (ಎಸ್ ಐ ಎಲ್) ಭಾರತದ ಉಕ್ಕು ಪ್ರಾಧಿಕಾರಕ್ಕೆ ವಹಿಸಿಕೊಡಲು ಸರ್ಕಾರ ಯೋಜಿಸಿದೆಯೇ?

ಕಾರ್ಖಾನೆ ವಹಿಸಿಕೊಳ್ಳಲು ಎಸ್. ಎ. ಐ. ಎಲ್. ಹಾಕಿರುವ ಷರತ್ತುಗಳೇನು?